ವಿದ್ಯಾಭ್ಯಾಸದ ಇಲಾಖಾ.

ಸ್ ಈ 1889ನೇ ಇಸವಿ ನವಂಬರ್ ತಾರೀಖು 14.

ಮೈಸೂರು ದೇಶೀಯ್ಯರ ಪರೀಕ್ಷೆ.

ಸ್ ಈ 1890ನೇ ಇಸವೀಲಿ ನಡೆಯುವ ಮೈಸೂರು ದೇಶೀಯ ವಿದ್ಯಾರ್ಥಿಗಳ ಪರೀಕ್ಷೆಗಾಗಿ ಇದರಡಿ ಕಂಡಂತೆ ಬಹುಮಾನಗಳು ಕೊಡಲ್ಪಡುವವು:—

(1) ಯಡೇಹಳ್ಳಿ ಮುನ್ಸೀಫ್ ಕೋರ್ಟ್ ಗುಮಾಸ್ತೆ ಮು|| ರಾ|| ಎಚ್. ಶಾಮಣ್ಣನವರಿಂದ ,ಯಡೇಹಳ್ಳಿ ತಾಲ್ಲೂಕು ಗವರ್ಮೆಂಟ್ ಕನ್ನಡ ಸ್ಕೂಲಿನಿಂದ ತೇರ್ಗಡೆ ಹೊಂದುವವರ ಪೈಕಿ ಪದ್ಯಸಾರದಲ್ಲಿ ಅಧಿಕ ನಂಬರುಗಳನ್ನು ಹೊಂದುವಂಥಾ ಬಬ್ಬ ವಿದ್ಯಾರ್ಥಿಗೆ, ದೊಡ್ಡ ಅಕ್ಷರದ ಮೂಲ ಜೈಮಿನಿ.

(2) ಯಡೇಹಳ್ಳಿ ಮುನ್ಸೀಫ್ ಕೋರ್ಟ್ ಕಾಪೀಸ್ಟ್, ಮು|| ರಾ|| ಎಚ್. ಸೂರ್ಯನಾರಾಯಣಪ್ಪನವರಿಂದ, ಯಡೇಹಳ್ಳಿ ತಾಲ್ಲೂಕು ಗವರ್ಮೆಂಟ್ ಕನ್ನಡ ಸ್ಕೂಲಿನಿಂದ ತೇರ್ಗಡೆ ಹೊಂದುವವರ ಪೈಕಿ ವ್ಯಾಕರಣದಲ್ಲಿ ಅಧಿಕ ನಂಬರುಗಳನ್ನ ಪಡೆಯುವ ಬಬ್ಬ ವಿದ್ಯಾರ್ಥಿಗೆ ದುರ್ಗೇಶನಂದಿ.

(3) ಮೇಲ್ಕೋಟೆ ಗವರ್ಮೆಂಟ್ ಕನ್ನಡ ಸ್ಕೂಲ್ ಹೆಡ್‌ಮಾಸ್ಟರ್, ಮು|| ರಾ|| ಎಂ. ಜಿ. ಶಾಮಯ್ಯೆಂಗಾರ್ರವರಿಂದ ಮೇಲ್ಕೋಟೆ ಗವರ್ಮೆಂಟ್ ಕನ್ನಡ ಸ್ಕೂಲಿನಿಂದ ತೇರ್ಗಡೆ ಹೊಂದುವವರ ಪೈಕಿ ಅಧಿಕ ನಂಬರುಗಳನ್ನು ಪಡೆಯುವಂಥಾ ಬಬ್ಬ ವಿದ್ಯಾರ್ಥಿಗೆ, ಕನ್ನಡ ಲಿಂಗಾಭಟ್ಟೀದು.

ಎಚ್. ರೈಸ್,
ಎಜ್ಯುಕೇಷನ್ ಸೆಕ್ರಟರಿ.

ಪಬ್ಲಿಕ್ ವರ್ಕ್ಸ್ ಇಲಾಖಾ.

ಇಸ್ತಿಹಾರ್‌ನಾಮೆ.

ತಾರೀಖು 18ನೇ ನವಂಬರ್ 1889.

ನಂ. 4765—596.—ತುಮಕೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರ್ ಮೆ|| ಸಿ. ಟಿ. ದಲ್ಯಲ್‌ಯವರಿಗೆ, ಮಾಹೆ ಮಜ ಕೂರ್24ನೇ ತಾರೀಖು ಲಾಗಾಯತು ಯಾ ಅವರು ಹೊರಟು ಹೋಗುವ ತಾರೀಖು ಲಾಗಾಯತು 25 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜೀವೆ,
ಕೆ. ಜೊಯ್ಸ, ಲೆ| ಕರ್ನಲ್ ಆರ್. ಈ.
ಮೈಸೂರು ಗವರ್ಮೆಂಟಿನ ಸೆಕ್ರಟರಿ.